ಮಧ್ಯಪ್ರದೇಶದ ಒಂದು ಚಿಕ್ಕ ಹಳ್ಳಿ ಸೀತಾಪುರದಲ್ಲಿ ಜನಿಸಿದ ಉದಯ ಪ್ರಕಾಶರು ಪ್ರಸಿದ್ಧ ಕವಿ ಮಾತ್ರವಲ್ಲದೆ ಶ್ರೇಷ್ಠ ಕಥೆಗಾರರು ಕೂಡ. ಪತ್ರಕರ್ತರಾಗಿ, ಕಿರುಚಿತ್ರಗಳ ನಿರ್ದೇಶಕರಾಗಿ ಮತ್ತು ಅನುವಾದಕರಾಗಿಯೂ ಕೆಲಸ ಮಾಡಿದವರು. 5 ಕವನ ಸಂಕಲನಗಳು, 13 ಕಥಾ ಸಂಕಲನಗಳು, 4 ಪ್ರಬಂಧ ಸಂಕಲನಗಳು ಪ್ರಕಟಗೊಂಡಿವೆ. ಇವರ ಅನೇಕ ಕಥೆಗಳು ಭಾರತೀಯ ಭಾಷೆಗಳು ಹಾಗೂ ಆಂಗ್ಲ ಭಾಷೆಯಲ್ಲಿ ಮಾತ್ರವಲ್ಲದೆ ರಶಿಯನ್, ಜಪಾನಿ, ಡಚ್, ಜರ್ಮನಿ, ಕೋರಿಯಾ, ಸ್ಪಾನಿಶ್, ಹಂಗೇರಿಯನ್ ಮುಂತಾದ ವಿದೇಶಿ ಭಾಷೆಗಳಲ್ಲಿಯೂ ಅನುವಾದಗೊಂಡಿವೆ. ಉದಯ ಪ್ರಕಾಶರಿಗೆ ಭಾರತ್ ಭೂಷಣ್ ಅಗ್ರವಾಲ್ ಪುರಸ್ಕಾರ, ಓಂ ಪ್ರಕಾಶ್ ಸಮ್ಮಾನ್, ಶ್ರೀಕಾಂತ್ ವರ್ಮಾ ಸ್ಮೃತಿ ಸಮ್ಮಾನ್ ಮುಂತಾದ ಪ್ರತಿಷ್ಠಿತ ಪುರಸ್ಕಾರಗಳು ಸಂದಿವೆ. 2010 ರಲ್ಲಿ ಇವರ 'ಮೋಹನದಾಸ್' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪುರಸ್ಕಾರ ಲಭಿಸಿದೆ.

ಹೋದ. ಫಿರೋಜಾ ಅವನಿಗೆ ಉರಿಯುವ ಒಲೆಯ ಸೌದೆಯಿಂದ ಹೊಡೆದಿದ್ದಳು. ಇಡೀ ಮಧ್ಯಾಹ್ನ ಟೇಪಚೂ ಮಟಮಟ ಬಿಸಿಲಿನಲ್ಲಿ ಕಾಡಿನಲ್ಲಿ ಹಸುಗಳೊಂದಿಗೆ ಅಲೆದ. ನಂತರ ಮರವೊಂದರ ನೆರಳ ಕೆಳಗೆ ನಿದ್ರಿಸಿದ; ದಣಿದಿದ್ದ ಅವನಿಗೆ ಕೂಡಲೇ ನಿದ್ರೆ ಆವರಿಸಿತ್ತು.

ಎಚ್ಚರವಾದಾಗ ಹೊಟ್ಟೆ ಹಸಿವೆಯಿಂದ ಚುಳ್ ಎನ್ನುತ್ತಿತ್ತು. ತುಂಬಾ ಹೊತ್ತು ಹಾಗೆಯೇ ಅಲ್ಲಿ ಬಿದ್ದು, ಆಕಾಶ ನೋಡುತ್ತಿದ್ದ. ಹಸಿವು ತೀವ್ರವಾದಾಗ, ಪ್ರಯಾಸದಿಂದ ಎದ್ದು, ಏನು ತಿನ್ನುವುದೆಂದು ಯೋಚಿಸಿದ. ಬಿದಿರು ಮರಗಳ ಆಚೆ, ಕಾಡಿನ ನಡುವೆ ಒಂದು ಬಯಲು ಪ್ರದೇಶವಿದ್ದು, ಅಲ್ಲಿ ಪುರನಿಯಾ ಕೆರೆ ಇದೆ ಎಂಬುದು ನೆನಪಿಗೆ ಬಂತು.

ಅವನು ಕೆರೆಗೆ ಹೋದ. ಆ ಕೆರೆಯಲ್ಲಿ ಹಗಲು ವೇಳೆಯಲ್ಲಿ ಹಳ್ಳಿಯ ಎಮ್ಮೆಗಳು ಮತ್ತು ರಾತ್ರಿ ವೇಳೆಯಲ್ಲಿ ಕಾಡಿನ ಹಂದಿಗಳು ಹೊರಳಾಡುತ್ತಿದ್ದವು. ನೀರು ಹಸಿರಿನಂತೆ ಕಾಣುತ್ತಿತ್ತು. ಅದರ ಮೇಲ್ಮೈಯಲ್ಲಿ ನೈದಿಲೆ ಮತ್ತು ತಾವರೆ ಎಲೆಗಳು ಚಾಚಿಕೊಂಡಿದ್ದವು. ಪಾಚಿಯ ದಪ್ಪ ಪದರು ನಡುವೆಯಿತ್ತು. ಟೇಪಚೂ ಕೆರೆಯಲ್ಲಿ ನುಗ್ಗಿದ. ಅವನು ಕಮಲ ಮತ್ತು ತಾವರೆಯ ಕಾಂಡವನ್ನು ತರಲು ಬಯಸುತ್ತಿದ್ದ. ಅವನಿಗೆ ಈಜು ಗೊತ್ತಿತ್ತು.

ಅವನು ಕೆರೆಯ ಮಧ್ಯ ಭಾಗಕ್ಕೆ ಬಂದು ಕಮಲದ ಹೂವುಗಳನ್ನು ತೊಟ್ಟು ಸಮೇತ ಕಿತ್ತು, ಒಟ್ಟು ಮಾಡಲಾರಂಭಿಸಿದ, ಒಂದು ಕೈಯಲ್ಲಿ ಅನೇಕ ಕಮಲದ ಹೂಗಳನ್ನು ಹಿಡಿದುಕೊಂಡಿದ್ದ. ಮರಳಿ ಬರಲು ಹೊರಳಿದಾಗ, ಈಜಲು ಕಷ್ಟವಾಯಿತು. ಅವನು ಯಾವ ಮಾರ್ಗದಿಂದ ನೀರನ್ನು ತಳ್ಳುತ್ತಾ ಮರಳಿ ಬರಲು ಬಯಸುತ್ತಿದ್ದನೋ, ಅಲ್ಲಿ ತಾವರೆ ಎಲೆಗಳ ದಟ್ಟ ದಂಟುಗಳು ಸುರುಳಿ-ಸುರುಳಿಯಾಕಾರದಲ್ಲಿ ಸುತ್ತಿಕೊಂಡಿದ್ದವು, ಅವನ ಕಾಲುಗಳು ಈ ಸುರುಳಿಗಳಲ್ಲಿ ಸಿಲುಕಿಕೊಂಡವು. ಈಗ ಅವನು ಕೆರೆಯ ಮಧ್ಯ ಭಾಗದಲ್ಲಿ 'ಬಕ್-ಬಕ್' ಎನ್ನಲಾರಂಭಿಸಿದ.

ಪರಮೇಸುರಾ ಎಮ್ಮೆಗೆ ನೀರು ಕುಡಿಸಲು ಕೆರೆಗೆ ಬಂದಾಗ ಅವನು 'ಗುಡಪ್-ಗುಡಪ್' ಎಂಬ ಸದ್ದು ಕೇಳಿದ. ದೊಡ್ಡ ಸೌರಿ ಮೀನೊಂದು ಕೆರೆಯಲ್ಲಿ ಮಜವಾಗಿ ಈಜುತ್ತಿದೆ ಎಂದು ಅವನಿಗೆ ಅನ್ನಿಸಿತು. ಹಾಗಂತ ಮೀನುಗಳಿಗೆ ಜ್ಯೇಷ್ಠ ಮಾಸದಲ್ಲಿ ಬೇಸಿಗೆ ಕಾಡುತ್ತದೆ. ಅವನು ಬಟ್ಟೆಗಳನ್ನು ಕಳಚಿ ನೀರಿಗಿಳಿದ. ಆ ಮೀನು ಇರುವ ಜಾಗಕ್ಕೆ ಹೋಗಿ, ಮುಳುಗು ಹಾಕಿ ಅದರ ಕತ್ತನ್ನು ತನ್ನ ಅಂಗೈಗಳಲ್ಲಿ ಹಿಡಿದುಕೊಳ್ಳಲು ಬಯಸಿದಾಗ ಅವನ ಕೈಗೆ ಟೇಪಚೂನ ಕೊರಳು ಸಿಕ್ಕಿತು. ಅವನು ಮೊದಲು ಹೆದರಿದ, ನಂತರ ಟೇಪಚೂನನ್ನು ಎಳೆದು ಹೊರಗೆ ತಂದ. ಈಗ ಟೇಪಚೂ ಸತ್ತವನಂತೆ ಬಿದ್ದಿದ್ದ. ಹೊಟ್ಟೆ ಬಲೂನಿನಂತೆ ಊದಿಕೊಂಡಿತ್ತು. ಕಣ್ಣು, ಕಿವಿಗಳಿಂದ ನೀರು ಒಸರುತ್ತಿತ್ತು. ಟೇಪಚೂ ಬೆತ್ತಲೆಯಾಗಿದ್ದು ಅವನ ಮೂತ್ರ ವಿಸರ್ಜನೆಯಾಗುತ್ತಿತ್ತು. ಪರಮೇಸುರಾ ಅವನ ಕಾಲುಗಳನ್ನು ಹಿಡಿದು, ಅವನನ್ನು ತಲೆಕೆಳಗು ಮಾಡಿ ಅವನ ಹೊಟ್ಟೆಗೆ ಮೊಣಕೈಯಿಂದ ಗುದ್ದಿದಾಗ, ನೀರು 'ಭಲ್-ಭಲ್' ಎಂದು ಬಾಯಿಂದ ಹೊರ ಬಂತು.